**B**

# CCE RR

**Revised & Un-Revised**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018**

**S.S.L.C. EXAMINATION, JUNE, 2018**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 25. 06. 2018 ] **ಸಂಕೇತ ಸಂಖ್ಯೆ : 83-K (Bio.)**

Date : 25. 06. 2018 ] **CODE NO. : 83-K (Bio.)**

## ವಿಷಯ : ವಿಜ್ಞಾನ

## Subject : SCIENCE

**(ಜೀವಶಾಸ್ತ್ರ / Biology)**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**


**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಜೈವಿಕ ವಿಘಟನೆಗೊಳಗಾಗದ ಮಾಲಿನ್ಯಕಾರಕಗಳನ್ನು ಮಾತ್ರ ಹೊಂದಿರುವ ಗುಂಪು<br>(a) ಮರದ ತುಂಡು, ಕಾಗದ, ಚರ್ಮ<br>(b) ಸೀಸ, ಬೇಕಲೈಟ್, ಡಿ.ಡಿ.ಟಿ.<br>(c) ಪ್ಲಾಸ್ಟಿಕ್, ಮಾರ್ಜಕಗಳು, ಹುಲ್ಲು<br>(d) ಪಾಲಿಥೀನ್, ಬೇಕಲೈಟ್, ಪಿ.ವಿ.ಸಿ.<br>(A) (b) ಮಾತ್ರ<br>(B) (a) ಮತ್ತು (c)<br>(C) (d) ಮಾತ್ರ<br>(D) (b) ಮತ್ತು (d)<br>***ಉತ್ತರ :*** (D) — (b) ಮತ್ತು (d) | 1 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 5. | ಒಬ್ಬ ವ್ಯಕ್ತಿಯಲ್ಲಿ ಮೂಗು ಮತ್ತು ಕಾಲಿನ ಕೆಳಭಾಗದಲ್ಲಿ ಹುಣ್ಣುಗಳು, ಕ್ರಮೇಣವಾಗಿ ಅಂಧತ್ವ ಮತ್ತು ಮರೆವು ಲಕ್ಷಣಗಳು ಕಾಣಿಸಿಕೊಂಡಿವೆ. ಈ ಲಕ್ಷಣಗಳನ್ನು ಹೊಂದಿರುವ ರೋಗ ಮತ್ತು ಈ ರೋಗಕ್ಕೆ ಕಾರಣವಾದ ಸೂಕ್ಷ್ಮಜೀವಿ,<br>(A) ಸಿಫಿಲಿಸ್ — ಟ್ರೆಪೋನೀಮಾ ಪ್ಯಾಲಿಡಂ<br>(B) ಗೊನೋರಿಯಾ — ನೈಸೀರಿಯಾ ಗೊನೋರಿಯೆ<br>(C) ಪ್ರಜನನಾಂಗದ ಮೇಲೆ ಗುಳ್ಳೆಗಳು — ಹ್ಯೂಮನ್ ಪ್ಯಾಪಿಲೋಮ ವೈರಸ್<br>(D) ಪ್ರಜನನಾಂಗಗಳ ಹರ್ಪಿಸ್ — ಹರ್ಪಿಸ್ ಸಿಂಪ್ಲೆಕ್ಸ್ ವೈರಸ್<br>***ಉತ್ತರ :*** (A) — ಸಿಫಿಲಿಸ್ — ಟ್ರೆಪೋನೀಮಾ ಪ್ಯಾಲಿಡಂ | 1 |
| 10. | ಅನ್ನನಾಳದ ಸ್ನಾಯುಗಳ ಲಕ್ಷಣಗಳೆಂದರೆ,<br>(A) ಪಟ್ಟೆಸಹಿತ, ಕೊಳವೆಯಾಕಾರ, ಐಚ್ಛಿಕ<br>(B) ಪಟ್ಟೆರಹಿತ, ಕದಿರಿನಾಕಾರ, ಅನೈಚ್ಛಿಕ<br>(C) ಪಟ್ಟೆಸಹಿತ, ಕೊಳವೆಯಾಕಾರ, ಅನೈಚ್ಛಿಕ<br>(D) ಪಟ್ಟೆರಹಿತ, ಕದಿರಿನಾಕಾರ, ಐಚ್ಛಿಕ<br>***ಉತ್ತರ :*** (B) — ಪಟ್ಟೆರಹಿತ, ಕದಿರಿನಾಕಾರ, ಅನೈಚ್ಛಿಕ | 1 |
| 14. | ಪಕ್ಷಿಗಳಲ್ಲಿ ಗರಿಗಳ ಯಾವುದಾದರೂ ಎರಡು ಕಾರ್ಯಗಳನ್ನು ಬರೆಯಿರಿ.<br>***ಉತ್ತರ :***<br>i) ರಕ್ಷಣೆ ನೀಡುತ್ತವೆ<br>ii) ದೇಹದ ಉಷ್ಣತೆಯನ್ನು ಕಾಪಾಡುತ್ತವೆ<br>iii) ಹಾರಾಟಕ್ಕೆ ನೆರವು ನೀಡುತ್ತವೆ<br>iv) ಲೈಂಗಿಕ ಆಕರ್ಷಣೆಗೆ ಕಾರಣವಾಗಿವೆ<br>(ಯಾವುದಾದರೂ ಎರಡು) ½ + ½ | 1 |
| 17. | ಮೆಂಡಲ್‌ನ 'ಪ್ರತ್ಯೇಕತೆಯ ನಿಯಮ'ವನ್ನು ನಿರೂಪಿಸಿ.<br>***ಉತ್ತರ :***<br>ಲಿಂಗಾಣುಗಳು ಉತ್ಪತ್ತಿಯಾಗುವಾಗ, ಮಿಯಾಸಿಸ್ ವಿಭಜನೆಯ ಸಂದರ್ಭದಲ್ಲಿ ವ್ಯತಿರಿಕ್ತ ಲಕ್ಷಣಗಳಿಗೆ ಕಾರಣವಾದ ಅಂಶಗಳು ಸಮ ಪ್ರಮಾಣದಲ್ಲಿ ಪ್ರತ್ಯೇಕವಾಗುತ್ತವೆ. | 1 |
| 18. | ಒಬ್ಬ ವ್ಯಕ್ತಿ ಹೆಚ್ಚು ಕೋಪಗೊಂಡಾಗ, ಅವನ ಹೃದಯದ ಬಡಿತ ಮತ್ತು ಉಸಿರಾಟದ ದರ ಹೆಚ್ಚಾಗುತ್ತದೆ. ಈ ಬದಲಾವಣೆಗಳನ್ನು ಸಹಜ ಸ್ಥಿತಿಗೆ ತರುವ ಸ್ವನಿಯಂತ್ರಕ ನರವ್ಯೂಹದ ಭಾಗವನ್ನು ಹೆಸರಿಸಿ.<br>***ಉತ್ತರ :***<br>ಪ್ಯಾರಾ ಅನುವೇದನಾ ವ್ಯೂಹ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಮೀನಿನ ಬಾಹ್ಯ ರಚನೆಯನ್ನು ತೋರಿಸುವ ಚಿತ್ರವನ್ನು ಬರೆದು, ಕೆಳಗಿನ ಭಾಗಗಳನ್ನು ಗುರುತಿಸಿ.<br>(a) ಅಪರ್ಕ್ಯುಲಮ್ (b) ಫಲಕಗಳು<br>***ಉತ್ತರ :***<br>*ಮೀನಿನ ಬಾಹ್ಯ ರಚನೆಯ ಚಿತ್ರ :*<br><br><br>1<br>*ಭಾಗಗಳು :*<br>a) ಅಪರ್ಕ್ಯುಲಮ್ b) ಫಲಕಗಳು ½ + ½ | 2 |
| 22. | ನಿಯಾಂಡರ್‌ಥಾಲ್ ಮಾನವನ ಯಾವುದಾದರೂ ನಾಲ್ಕು ದೈಹಿಕ ಲಕ್ಷಣಗಳನ್ನು ತಿಳಿಸಿ.<br>***ಅಥವಾ***<br>ಕಾಕಸಾಯಿಡ್ ಮಾನವರು ಮತ್ತು ಕಾಂಗಾಯಿಡ್ ಮಾನವರ ಯಾವುದಾದರೂ ಎರಡು ದೈಹಿಕ ಲಕ್ಷಣಗಳನ್ನು ಬರೆಯಿರಿ.<br>***ಉತ್ತರ :***<br>i) ಅವನು ಕುಳ್ಳನಾಗಿದ್ದ<br>ii) ಸದೃಢವಾದ ಹಾಗೂ ಅತೀ ಬಲಶಾಲಿಯಾದ ದೇಹ ಅವನಿಗಿತ್ತು<br>iii) ಹುಬ್ಬು ಅತ್ಯಂತ ದಟ್ಟವಾಗಿತ್ತು<br>iv) ಜಾರುತ್ತಿರುವ ಹಣೆ, ಚಿಕ್ಕದಾದ ಕೆನ್ನೆಗಳು<br>v) ಮುಂದಕ್ಕೆ ಚಾಚಿದ ದವಡೆಗಳು (ಯಾವುದಾದರೂ ನಾಲ್ಕು) 4 × ½ | 2 |
| | ***ಅಥವಾ***<br>*ಕಾಕಸಾಯಿಡ್ ಮಾನವರು :*<br>i) ಚರ್ಮದ ಬಣ್ಣ ಕಂದು<br>ii) ನೀಲಿ ಅಥವಾ ಗಾಢ ಕಂದು ಬಣ್ಣದ ಕಣ್ಣುಗಳು<br>iii) ಎತ್ತರದ ನಾಸಿಕ, ನೀಳವಾದ ನಾಸಿಕ ರಂಧ್ರಗಳು<br>iv) ನೇರ ಅಥವಾ ಗುಂಗುರು ಕೂದಲನ್ನು ಹೊಂದಿವೆ<br>*ಕಾಂಗಾಯಿಡ್ ಮಾನವರು :*<br>i) ಕಪ್ಪು ಚರ್ಮ ii) ದಪ್ಪ ತುಟಿ<br>iii) ಅಗಲ ನಾಸಿಕ iv) ಗುಂಗುರು ಕೂದಲು<br>(ಪ್ರತಿಯೊಂದಕ್ಕೂ ಎರಡು ಅಂಶಗಳು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 25. | "ಪರಿಸರವಾದಿಗಳು ಏರೋಸಾಲ್‌ಗಳನ್ನು ಹೊಂದಿರುವ ಉತ್ಪನ್ನಗಳ ಹೆಚ್ಚಿನ ಬಳಕೆಯನ್ನು ವಿರೋಧಿಸುತ್ತಾರೆ" ಕಾರಣಗಳನ್ನು ಕೊಡಿ.<br>***ಉತ್ತರ :***<br>i) ಕ್ಲೋರೋಫ್ಲೂರೋ ಕಾರ್ಬನ್‌ಗಳು (ಸಿ.ಎಫ್.ಸಿ.ಗಳು) ಎಂಬ ರಾಸಾಯನಿಕಗಳು ಬಿಡುಗಡೆಯಾಗುತ್ತವೆ.<br>ii) ಓಝೋನ್ ಪದರವನ್ನು ತೆಳುವಾಗಿಸುತ್ತದೆ.<br>iii) ಜೀವಿಗಳಲ್ಲಿ ಉತ್ಪರಿವರ್ತನೆಗಳು ಎಂಬ ದಿಢೀರ್ ಬದಲಾವಣೆಗಳಾಗುತ್ತವೆ.<br>iv) ಸಸ್ಯ ಮತ್ತು ಪ್ರಾಣಿಗಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ.<br>v) ಪರಿಸರ ವ್ಯವಸ್ಥೆಯನ್ನು ಅಸಮತೋಲನಗೊಳಿಸುತ್ತದೆ.<br>vi) ವಾತಾವರಣದಲ್ಲಿ ಅನಿಲಗಳ ಪ್ರಮಾಣದಲ್ಲಿ ಏರುಪೇರುಗಳು ಉಂಟಾಗುತ್ತವೆ.<br>(ಇತರೆ ಯಾವುದಾದರೂ ಸೂಕ್ತ ಉತ್ತರ) (ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 28. | "ಸರ್ಕಾರವು ನಗರ ಪ್ರದೇಶದ ಜನರಿಗೆ ತಾರಸಿ ಉದ್ಯಾನವನಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಬೇಕು" ಏಕೆ ? ಕಾರಣಗಳನ್ನು ಕೊಡಿ.<br>***ಅಥವಾ***<br>"ಕುಲಾಂತರಿ ಸಸ್ಯಗಳು ದೇಶದ ಆಹಾರದ ಕೊರತೆಯನ್ನು ಕಡಿಮೆ ಮಾಡುವಲ್ಲಿ ಮುಖ್ಯಪಾತ್ರವನ್ನು ವಹಿಸುತ್ತವೆ." ಹೇಗೆ ? ವಿವರಿಸಿ.<br>***ಉತ್ತರ :***<br>i) ಸುರಕ್ಷಿತ ಹಸಿರು ಪ್ರದೇಶಗಳಿಗೆ ಮುಕ್ತ ಅವಕಾಶವನ್ನು ಹೆಚ್ಚಿಸುತ್ತದೆ.<br>ii) ಸಸ್ಯಗಳು ಕಾರ್ಬನ್ ಡೈಆಕ್ಸೈಡನ್ನು ಹೀರಿಕೊಳ್ಳುವುದರಿಂದ ಗಾಳಿಯ ಗುಣಮಟ್ಟ ಹೆಚ್ಚುತ್ತದೆ.<br>iii) ಹಕ್ಕಿಗಳಿಗೆ ಮತ್ತು ಚಿಟ್ಟೆಗಳಿಗೆ ವಾಸ ನೆಲೆಯನ್ನು ಒದಗಿಸುತ್ತದೆ.<br>iv) ತಾರಸಿ ಉದ್ಯಾನ ಮನರಂಜನೆಯ ತಾಣವಾಗುತ್ತದೆ.<br>v) ನಗರ ಪ್ರದೇಶಗಳಲ್ಲಿ ಆಹಾರ ಬೆಳೆಯುವುದನ್ನು ಇದು ಉತ್ತೇಜಿಸುತ್ತದೆ.<br>vi) ತಾಪವನ್ನು ನಿಯಂತ್ರಿಸುತ್ತದೆ.<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |
| | ***ಅಥವಾ***<br>i) ಇಳುವರಿ ಹೆಚ್ಚಾಗುತ್ತದೆ.<br>ii) ರೋಗ ಮುಕ್ತ ಸಸ್ಯಗಳನ್ನು ಅಭಿವೃದ್ಧಿಪಡಿಸಬಹುದು.<br>iii) ವೈರಸ್ ನಿರೋಧಕ ಸಸ್ಯಗಳನ್ನು ಪಡೆಯಬಹುದು.<br>iv) ವಿಟಮಿನ್ 'ಎ' ಪೂರಿತ ಸಸ್ಯಗಳನ್ನು ಪಡೆಯಬಹುದು.<br>v) ಪೀಡೆ ನಿರೋಧಕ ಸಸ್ಯಗಳನ್ನು ಪಡೆಯಬಹುದು.<br>(ಇತರೆ ಯಾವುದಾದರೂ ಸೂಕ್ತ ಉತರ) (ಯಾವುದಾದರೂ ನಾಲ್ಕು) $4 \times \frac{1}{2}$ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

31. ಒಬ್ಬ ವಿದ್ಯಾರ್ಥಿಯು ಸಂಯುಕ್ತ ಸೂಕ್ಷ್ಮದರ್ಶಕದಲ್ಲಿ ಒಂದು ಸಸ್ಯ ಕಾಂಡದ ಅಡ್ಡ ಸೀಳಿಕೆಯನ್ನು ವೀಕ್ಷಿಸಿ ಈ ಕೆಳಗಿನ ಚಿತ್ರವನ್ನು ಬರೆಯುತ್ತಾನೆ.



(a) ಈ ಕಾಂಡವು ಆವೃತ ಸಸ್ಯಗಳ ಯಾವ ಗುಂಪಿಗೆ ಸೇರಿದೆ ? ಹೆಸರಿಸಿ.

(b) ಬೇರು ಮತ್ತು ಹೂವಿಗೆ ಸಂಬಂಧಿಸಿದಂತೆ ಆ ಗುಂಪಿನ ಗುಣಲಕ್ಷಣಗಳನ್ನು ಬರೆಯಿರಿ.


***ಉತ್ತರ :***

a) ಇದು ಏಕದಳ ಸಸ್ಯ ಗುಂಪಿಗೆ ಸೇರಿದೆ. 1

b) i) ಇದು ತಂತು ಬೇರಿನ ವ್ಯವಸ್ಥೆಯನ್ನು ಹೊಂದಿದೆ. ½

ii) ಹೂವಿನ ದಳಗಳು ಮೂರರ ಗುಣಿತದಲ್ಲಿರುತ್ತವೆ. ½ — 2

34. ಈ ಕೆಳಗೆ ಕೊಟ್ಟಿರುವ ಚಿತ್ರದಲ್ಲಿ ಒಬ್ಬ ವಿದ್ಯಾರ್ಥಿಯು *A, B, C* ಮತ್ತು *D* ಭಾಗಗಳನ್ನು ತಪ್ಪಾಗಿ ಗುರುತಿಸಿದ್ದಾನೆ.




ಅವನ ತಪ್ಪನ್ನು ಸರಿಪಡಿಸಿ, ಚಿತ್ರದ *A, B, C* ಮತ್ತು *D* ಭಾಗಗಳನ್ನು ಬರೆಯಿರಿ.

***ಉತ್ತರ :***

*A* — ಕೊಬ್ಬಿನ ಪದರಗಳು    *B* — ಪ್ರೋಟೀನ್ ತಿರುಳು

*C* — ಆರ್.ಎನ್.ಎ.    *D* — ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್ ಕಿಣ್ವ    4 × ½ — 2

36. ದ್ವಿತಳೀಕರಣ ಎಂದರೇನು ? ದ್ವಿತಳೀಕರಣದಲ್ಲಿ ಹಳದಿ ಬೀಜವನ್ನು ಉತ್ಪತ್ತಿ ಮಾಡುವ ಎತ್ತರದ ಬಟಾಣಿ ಸಸ್ಯದ ( TTYY ) ಜೊತೆ ಹಸಿರು ಬೀಜವನ್ನು ಉತ್ಪತ್ತಿಮಾಡುವ ಗಿಡ್ಡ ಬಟಾಣಿ ( ttyy ) ಸಸ್ಯವನ್ನು ಸಂಕರಣಗೊಳಿಸಿದಾಗ $F_2$ ಪೀಳಿಗೆಯಲ್ಲಿ ಬರುವ ಫಲಿತಾಂಶವನ್ನು ಚೆಕ್ಕರ್ ಬೋರ್ಡ್‌ನ ಸಹಾಯದಿಂದ ವ್ಯಕ್ತಪಡಿಸಿ.

***ಅಥವಾ***

ಡಿ.ಎನ್.ಎ. ಅಣುವಿನ ದ್ವಿಸುರುಳಿ ರಚನೆಯನ್ನು ವಿವರಿಸಿ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|

***ಉತ್ತರ :***

ಎರಡು ಲಕ್ಷಣಗಳಿಗೆ ಸಂಬಂಧಿಸಿದಂತೆ ಭಿನ್ನವಾದ ಎರಡು ರೂಪಗಳನ್ನು ತೋರಿಸುವ ಸಸ್ಯಗಳನ್ನು ಸಂಕರಿಸುವ ಕ್ರಿಯೆಗೆ 'ದ್ವಿತಳೀಕರಣ' ಎನ್ನುವರು. 1

| *ಲಿಂಗಾಣುಗಳು* | *TY* | *Ty* | *tY* | *ty* | |
|---|---|---|---|---|---|
| *TY* | *TTYY* | *TTYy* | *TtYY* | *TtYy* | ½ |
| *Ty* | *TTYy* | *TTyy* | *TtYy* | *Ttyy* | ½ |
| *tY* | *TtYY* | *TtYy* | *ttYY* | *ttYy* | ½ |
| *ty* | *TtYy* | *Ttyy* | *ttYy* | *ttyy* | ½ |

3

**ಅಥವಾ**

i) ಡಿಎನ್‌ಎ ಅಣುವು ಸುರುಳಿ ಸುತ್ತಿಕೊಂಡಿರುವ ಒಂದು ಏಣಿಯಂತಿದೆ.

ii) ಒಂದು ಜೋಡಿ ಪಾಲಿನ್ಯೂಕ್ಲಿಯೋಟೈಡ್‌ನಿಂದಾದ ಸರಪಳಿಗಳು ಒಂದಕ್ಕೊಂದು ಹೆಣೆದು ವಿರುದ್ಧ ದಿಕ್ಕಿನಲ್ಲಿ ಸಮಾನಾಂತರವಾಗಿ ನುಲಿದಿದೆ.

iii) ಪ್ರತಿ ನ್ಯೂಕ್ಲಿಯೋಟೈಡ್‌ಗಳು – ಡಿಆಕ್ಸಿರೈಬೋಸ್ ಸಕ್ಕರೆ, ಫಾಸ್ಫೇಟ್ ಮತ್ತು ನೈಟ್ರೋಜನ್ ಕ್ಷಾರಗಳು ಹೊಂದಿವೆ.

iv) ಡಿಎನ್‌ಎ ಏಣಿಯ ಎರಡು ಕಂಬಗಳು ಪರ್ಯಾಯವಾಗಿ ಪೆಂಟೋಸ್ ಸಕ್ಕರೆ ಮತ್ತು ಫಾಸ್ಫೇಟುಗಳಿಂದ ಮಾಡಲ್ಪಟ್ಟಿವೆ.

v) ನೈಟ್ರೋಜನ್ ಕ್ಷಾರಗಳು ಎದುರುಬದುರಿನ ಕಂಬಗಳನ್ನು ಮೆಟ್ಟಿಲುಗಳಂತೆ ಸೇರಿಸುತ್ತವೆ.

vi) ನೈಟ್ರೋಜನ್ ಕ್ಷಾರಗಳಲ್ಲಿ ಪ್ಯೂರಿನ್ ಮತ್ತು ಪಿರಿಮಿಡೀನ್‌ಗಳೆಂಬ ಎರಡು ವಿಧಗಳಿವೆ. ಅಡಿನೈನ್ ( $A$ ) ಯಾವಾಗಲೂ ಥೈಮಿನ್ ( $T$ ) ಜೊತೆಯಲ್ಲಿ ಮತ್ತು ಗ್ವಾನಿನ್ ( $G$ ) ಯಾವಾಗಲೂ ಸೈಟೋಸಿನ್ ( $C$ ) ಜೊತೆಯಲ್ಲಿ ಜೋಡಣೆಯಾಗಿರುತ್ತದೆ / ಪೂರಕ ಕ್ಷಾರ ಜೋಡಣೆ. 6 × ½ 3


39. ನರಕೋಶದ ರಚನೆ ಮತ್ತು ಕಾರ್ಯವನ್ನು ವಿವರಿಸಿ.

***ಉತ್ತರ :***

*ರಚನೆ :*

i) ದೊಡ್ಡ ಕೋಶಕೇಂದ್ರವನ್ನು ಹೊಂದಿರುವ ಕೋಶಕಾಯಕ್ಕೆ ಸೈಟಾನ್ ಎನ್ನುವರು. ಅದರಿಂದ ಹೊರಚಾಚುವ ಚಿಕ್ಕ ರಚನೆಗಳಿಗೆ ಡೆಂಡ್ರೈಟ್‌ಗಳು ಎನ್ನುವರು.

ii) ಇದರಲ್ಲಿ ನೀಳವಾಗಿರುವ ಶಾಖೆಗೆ ಆಕ್ಸಾನ್ ಎನ್ನುವರು.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | iii) ಆಕ್ಸಾನ್ ತನ್ನ ತುದಿಯಲ್ಲಿ ಹೊಂದಿರುವ ಶಾಖೆಗಳಿಗೆ ಟೀಲೋಡೆಂಡ್ರಾನ್ ಎನ್ನುವರು.<br>iv) ಆಕ್ಸಾನ್ ಸುತ್ತ ಕೊಬ್ಬಿನ ಪದರದ ಹೊದಿಕೆಯಿದ್ದು ಅದಕ್ಕೆ ಮಯಲಿನ್ ಹೊದಿಕೆ ಎನ್ನುವರು. 4 × ½<br>*ಕಾರ್ಯ :*<br>ಇದು ದೇಹದ ಬಾಹ್ಯ ಹಾಗೂ ಆಂತರಿಕ ಪ್ರಚೋದನೆಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸುತ್ತದೆ ಮತ್ತು ಮಾಹಿತಿಯನ್ನು ದೇಹದ ವಿವಿಧ ಭಾಗಗಳಿಂದ ನರಕೇಂದ್ರಗಳಿಗೆ ನರವೇಗಗಳ ರೂಪದಲ್ಲಿ ಕೊಂಡೊಯ್ಯುತ್ತದೆ.<br>**ಅಥವಾ**<br>ಪ್ರಚೇತನ ಉಂಟುಮಾಡುತ್ತದೆ. 1 | 3 |
| 42. | ಮಾನವನ ಕಣ್ಣಿನ ನೀಳಛೇದ ನೋಟದ ಚಿತ್ರವನ್ನು ಬರೆದು, ಈ ಕೆಳಗಿನ ಭಾಗಗಳನ್ನು ಗುರುತಿಸಿ.<br>(a) ದೃಷ್ಟಿಯು ಅತ್ಯಂತ ಸ್ಪಷ್ಟವಾಗಿ ಉಂಟಾಗುವ ಭಾಗ<br>(b) ದೃಶ್ಯದ ಆವೇಗಗಳನ್ನು ಮಿದುಳಿನ ಮಹಾಮಸ್ತಿಷ್ಕಕ್ಕೆ ಒಯ್ಯುವ ಜ್ಞಾನವಾಹಿ ನರ<br>***ಉತ್ತರ :***<br><br>3 + ½ + ½ | 4 |